ಡಕಾಯಿತರ ಹಾವಳಿ ತಪ್ಪಿಸುವ ಬಗ್ಗೆ

೧೪೮೬ (೨೨೫೯) ಶ್ರೀ ಬಸವಂತರೆಡ್ಡಿ ಮೊತಕಪಲ್ಲಿ (ಸೇಡಂ):- ಮಾನ್ಯ ಗೃಹ ಮತ್ತು ಅಬ್ಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗ-ಗುಡಗಲ್ ರಸ್ತೆಯ ಮೇಲೆ ಮಲಖೇಡ ಸೇಡಂ ಮಧ್ಯದಲ್ಲಿ ಎನೇ ನಂಬರ್ ಗೇಟ್ ಸಮೀಪ ದರೋಡೆಕೋರರು ದರೋಡೆ ಮಾಡಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಈ ದರೋಡೆಕೋರರು ತೆಲುಗು ಭಾಷೆ ಆಡುವವರೆಂದು ಪತ್ರಿಕೆಗಳಲ್ಲಿ ಪ್ರಕಟವಾಗಿದ್ದು ಗಮನಿಸಿದರೆ ಆಂಧ್ರ ಪ್ರದೇಶದಲ್ಲಿರುವ ನಕ್ಸಲೈಟ್‌ಗಳೆಂಬ ಭಾವನೆ ಉಂಟಾಗುವುದಿಲ್ಲವೆ?

ಇ) ಇದನ್ನು ತಡೆಗಟ್ಟಲು ಸುತ್ತಮುತ್ತಲೂ ಸಿಮೆಂಟ್ ಕಾರ್ಖಾನೆಗಳು ಇರುವ ಮಲಖೇಡ ಹಾಗೂ ಗಡಿ ಪ್ರಾಂತ್ಯದಲ್ಲಿ ಬರುವ ಹೈದ್ರಾಬಾದ್-ಬಿಜಾಪುರ ರಸ್ತೆ ಮಧ್ಯದಲ್ಲಿರುವ ಮೇದಕೆ ಸರಹದ್ದಿನಲ್ಲಿ ಪೋಲೀಸ್ ಠಾಣೆಗಳ ವ್ಯವಸ್ಥೆ ಮಾಡಿ, ಈ ಹಾವಳಿಯನ್ನು ತಪ್ಪಿಸಬಹುದಲ್ಲವೆ?

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬ್ಕಾರಿ ಸಚಿವರು):-

ಅ) ಹೌದು, ಬಂದಿದೆ. ಈ ದರೋಡೆಯು ದಿನಾಂಕ ೩ ಮತ್ತು ೪ನೇ ಮಾರ್ಚಿ ೧೯೯೨ರಂದು ರಾತ್ರಿ ನಡೆದಿದೆ.

ಆ) ಸಾಕ್ಷಿಗಳ ಹೇಳಿಕೆಗನುಸಾರ, ದರೋಡೆಕೋರರು ತೆಲುಗು, ಹಿಂದಿ ಮತ್ತು ಲಂಬಾಣಿ ಭಾಷೆಗಳನ್ನು ಮಾತನಾಡುತ್ತಿದ್ದರೆಂದು ತಿಳಿದು ಬಂದಿದೆ. ಹಾಗೂ ಇವರು ವೃತ್ತಿಪರ ದರೋಡೆಕೋರರು ಎಂದು ತನಿಖೆಯಿಂದ ತಿಳಿದು ಬಂದಿದೆ ಆದರೆ ಇವರು ಆಂಧ್ರ ಪ್ರದೇಶದ ನಕ್ಸಲೈಟ್‌ಗಳಲ್ಲ.

ಇ) ಪರಿಸ್ಥಿತಿ ಹಾಗೂ ಅವಶ್ಯಕತೆಯನ್ನು ನೋಡಿಕೊಂಡು ಈ ಬಗ್ಗೆ ಪರಿಶೀಲಿಸಲಾಗುವುದು. ಗುಲ್ಬರ್ಗಾ ಕೇಂದ್ರ ಸ್ಥಾನವಾಗಿದ್ದು, ಒಬ್ಬ ಅಡಿಷನಲ್ ಎಸ್. ಪಿ. ಯವರ ಚಾರ್ಜ್‌ನಲ್ಲಿ ಒಂದು ದರೋಡೆ ನಿರೋಧಕ ದಳವನ್ನು ಸೃಷ್ಟಿಸಿ ಈಗಾಗಲೇ ಆದೇಶ ಹೊರಡಿಸಲಾಗಿದೆ.

ಕುಂದಾಪುರ ತಾಲ್ಲೂಕುಗಳಲ್ಲಿ ಮಟ್ಕಾ ಹಾವಳಿ ಹೆಚ್ಚಾಗುತ್ತಿರುವ ಬಗ್ಗೆ

೧೪೯೩ (೨೨೭೬) ಶ್ರೀ ಪಿ. ಬಸವರಾಜ್ (ಬ್ರಹ್ಮಾವರ):- ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿ ಕುಂದಾಪುರ ತಾಲ್ಲೂಕುಗಳಲ್ಲಿ ಮಟ್ಕಾ ಹಾವಳಿ ದಿನೇ ದಿನೇ ಹೆಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಹಾವಳಿಯಿಂದ ಕೂಲಿಕಾರರು ಶ್ರಮಿತ ವರ್ಗಗಳು ತೊಂದರೆ ಅನುಭವಿಸುತ್ತಿರುವುದು ನಿಜವಲ್ಲವೇ?

ಇ) ಈ ಮಟ್ಕಾ ಹಾವಳಿಯನ್ನು ಕೂಡಲೇ ತಡೆಗಟ್ಟಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು?

ಶ್ರೀ ಧರ್ಮಸಿಂಗ್ (ಗೃಹ ಸಚಿವರು):-